ಕಾಲದಲ್ಲೇ...' ತಲೆ ಎತ್ತದೆ ಅನ್ನದ ತುತ್ತನ್ನು ಎಸರಲ್ಲಿ ಒಂದೇ ಸಮನೆ ಒತ್ತುತ್ತಾ ಕುಳಿತವಳ ಮಾತಿನಲ್ಲಿ ಆಕ್ಷೇಪಣೆ ಧ್ವನಿಸುತ್ತಿತ್ತು. ಮಗಳ ಬುದ್ಧಿವಂತಿಕೆ ಮಾತಿಗೆ ಹಹಹ ಅಂತ ಚಂದ್ರಯ್ಯ ನಕ್ಕ. ತಾನಿಟ್ಟ ಹೆಸರನ್ನು ಕತ್ತೆಗಳಿಗೆ ಹೋಲಿಸಿದ್ದಕ್ಕೆ ಕೆಂಪಮ್ಮನಿಗೆ ಕೆಟ್ಟ ಸಿಟ್ಟು ಬಂದು, 'ಇದ್ಕೇನು ಕಡಮೆ ಇಲ್ಲ. ಕಾಲೇಜಿಗ್ಹೋಗ್ತಿದ್ದ ಹಾಗೆ ಫೇಲಾಗಿದ್ಯಾಕೆ ಮತ್ತೆ? ಒಂದು ಕ್ಲಾಸಿಗಿಂತ ಒಂದು ಕ್ಲಾಸಲ್ಲಿ ಜಾಸ್ತಿ ಕಲ್ತು ದೊಡ್ಡ ಮೇಮಸಾಬ ಆಗ್ಬೇಕಾಗಿತ್ತು...' ಅಂತ ಸುರು ಹಚ್ಚಿದಳು. ಚಂದ್ರಪ್ಪ 'ಹೋಗ್ಲಿ ಬಿಡಮ್ಮ, ಜಾತಕದಲ್ಲಿ ಸುಬ್ಬಿ ಅಂತ ಇದ್ದೇ ಇರ್ತದಲ್ಲ. ಬೇರೆಯೋರು ಅವಳಿಗಿಷ್ಟವಾದ ಹೆಸರಲ್ಲಿ ಕರೀಲಿ ಬಿಡು' ಅಂದ. ಅಂಗಡಿಯಲ್ಲಿ ಅವನಿಗೆ ಮದುವೆ ಸೀಜನ್ನಿನ ಒತ್ತಡವಿತ್ತು. ಇವತ್ತು ಬರಬೇಕಾದ ಬಟ್ಟೆಗಳು ಬಂದು ಮುಟ್ಟಿರಲಿಲ್ಲ.

**ಈ ಅಂಗಸೌಷ್ಟವ ಕತ್ತೇಹಾಲು ಕುಡಿದಿದ್ದಕ್ಕೇ ಬಂದಿರಬಹುದು. ಕತ್ತೆಗೆ ಹೊರ ಸೌಂದರ್ಯವಿಲ್ಲ. ಎಲ್ಲಾ ಒಳಗಿಟ್ಟಿದ್ದಾನಂತೆ ದೇವರು. ಅದು ಸ್ಥಿತಪ್ರಜ್ಞ. ಅದ್ಭುತ ಪುರುಷತ್ವ ಅದರದು. ಅದರ ಹಾಲು ಕುಡಿದರೆ ಗಂಡಸು ಗಟ್ಟಿ ಪುರುಷತ್ವದವನಾದರೆ ಹೆಂಗಸು ಅಸಾಧಾರಣ ಹೆಣ್ಣುತನ ಪಡೀತಾಳಂತೆ...**

ಸುಬ್ಬಿ ಮತ್ತೆ ಮಾತಿಗಿಳಿಯುವುದನ್ನು ತಪ್ಪಿಸಿಕೊಂಡು ರೂಮು ಸೇರಿ, ಬಾಗಿಲು ಹಾಕಿಕೊಂಡಳು. ಹಳೇಕಾಲದ ಮನೆ ದೊಡ್ಡದಾಗಿತ್ತು. ಆದರೆ ಎಲ್ಲರಿಗು ಒಂದೊಂದು ರೂಮು ಅಂತಿರಲಿಲ್ಲ. ತನಗೆ ಬೇಕು ಅಂತ ಹಟ ಮಾಡಿದ್ದಕ್ಕೆ, ವಯಸ್ಸಿಗೆ ಬರ್ತಿರೊ ಹುಡುಗಿ, ಬಟ್ಟೆ ಮತ್ತೊಂದು ಬದಲಿಸೋದಿರ್ತದೆ; ತಮ್ಮ ಕಾಲದ ಹಾಗಲ್ಲ, ಅಂತ ರಾಜಮ್ಮ ವಕಾಲತ್ತು ವಹಿಸಿ ನಡುಮನೆಗೆ ತಾಗಿದ್ದ ಕಾಳುಕಡಿ ಸಂಗ್ರಹಿಸಿಡುವ ಕೋಣೆಯನ್ನು ಖಾಲಿಮಾಡಿ ಬಿಟ್ಟು ಕೊಟ್ಟಿದ್ದಳು. ಬಾಗಿಲು ಭದ್ರವಾಗಿದೆ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿಕೊಂಡವಳು ಭುಜದ ಮೇಲಿನ ಚುನ್ನಿ ತೆಗೆದಿಟ್ಟು, ಸಲ್ವಾರ ಕಮೀಜು ಕಳಚಿ ಮಂಚದ ಮೇಲೆ ಹಾಕಿ ಗೋಡೆಕಡೆ ಮುಖವಾದಳು. ಎದುರಿನ ನಿಲುವುಗನ್ನಡಿಯಲ್ಲಿ ಬಿಳಿಯ ಬಣ್ಣದ ಬ್ರಾ ಮತ್ತು ಪ್ಯಾಂಟಿಯಲ್ಲಿ ಪ್ರತಿಬಿಂಬ ಸಾಕಾರಗೊಂಡಿತ್ತು. ಬಲಗೈಯನ್ನು ಸೊಂಟದ ಮೇಲಿರಿಸಿ ಎಡಗೈ ಎತ್ತಿ ತಲೆಗಾಧರಿಸಿದಳು. ಕತ್ತನ್ನು ತುಸುವೆ ಕೊಂಕಿಸಿ ಬಲಹಿಮ್ಮಡಿಯನ್ನು ಚೂರು ಎತ್ತಿದಳು. ಹಾಲಿವುಡ್ ನಟಿಯೊಬ್ಬಳ ಪೋಸು ಇದು ಅಂತ ನೆನಪಿಸಿಕೊಂಡಳು. ನಿಧಾನಕ್ಕೆ ಬ್ರಾ ಮತ್ತು ಪ್ಯಾಂಟಿಯನ್ನು ಕಳಚಿರಿಸಿ ಮತ್ತೆ ಕನ್ನಡಿಗೆದುರಾದಳು. ಎದುರಿನ ಸುಂದರಿಯನ್ನು ವೀಕ್ಷಿಸಿ ಒಂದು ಮುಗುಳ್ನಗೆ ಕೊಟ್ಟು ಅಮ್ಮನ ಡ್ರಾವರಿನಿಂದ ತಂದ ಹೊಲಿಗೆಮಷೀನಿನ ಅಳತೆಟೇಪನ್ನು ಬಿಚ್ಚಿ ನಿತಂಬದ ಸುತ್ತ ಇಟ್ಟಳು. ನಂತರ ಹೊಕ್ಕುಳಿಂದ ಸ್ವಲ್ಪಮೇಲೆ ಕಿರಿದಾದ ಜಾಗದಲ್ಲಿ ಸುತ್ತಿನೋಡಿದಳು. ಈಗ ಎದೆಯ ಸರದಿ, ಮೃದುವಾಗಿ ಪೂರ್ಣಎತ್ತರವನ್ನು ಆವರಿಸುವಂತೆ ಸುತ್ತಿ ಅಳತೆ ನೋಡಿದಳು. ಸಣ್ಣರೋಮಾಂಚನದ ನಡುವೆ ವಾವ್! ಎಂಬ ಪಿಸುಧ್ವನಿ ಹೊರಟಿತು. ಮೂವತ್ನಾಲ್ಕು ಇಪ್ಪತ್ತೆಂಟು ಮೂವತ್ತೆರಡು! ತನಗೆ ಒಳ್ಳೇ ಫಿಗರಿದೆ ಅಂತ ಗೊತ್ತಿತ್ತವಳಿಗೆ; ಆದರೆ, ಇವತ್ತು ಕಂಡುಕೊಂಡ ಈ ಸಂಖ್ಯೆಗಳು, ಟೀವಿ ಸೀರಿಯಲ್ಲುಗಳ ನಟಿಯರು ಹೋಗಲಿ; ಸ್ಯಾಂಡಲ್‌ವುಡ್, ಬಾಲಿವುಡ್‌ನಲ್ಲಿ ಸಹ ಎಷ್ಟುಜನರಿಗಿರಬಹುದು! ಎಂಬ ಹೆಮ್ಮೆಯನ್ನು ಮೂಡಿಸಿತು. ಐದಡಿಏಳಿಂಚು ಎತ್ತರ. ಬಾದಾಮಿಯಾಕಾರದ ಮುಖ